## ಕಾಲು ದಾರಿಯಲ್ಲೇ ನಡೆಯಿರಿ

ಬೆಂಗಳೂರಿನ ಮಹಾ ನಗರಪಾಲಿಕೆ ಮುಂಭಾಗದಲ್ಲಿ, ಬಾದಾಮಿ ಹೌಸ್ ಜಾಗದಲ್ಲಿ ಎದ್ದೇಳಲಿರುವ ಬೃಹತ್ ಕಟ್ಟಡದ ಮುಂದೆ ಈ ಫಲಕವಿದೆ. 'ದಯವಿಟ್ಟು ಕಾಲು ದಾರಿಯಲ್ಲೇ ನಡೆಯಿರಿ' ಎಂದು ಇಂಗ್ಲಿಷ್ ಭಾಷೆಯಲ್ಲಿ ವಿನಂತಿಸುತ್ತಿರುವ ಈ ನಿರಾಭರಣ ಸುಂದರಿ ಬಹುಶಃ ತ್ರಿ ಶತಾಯುಷಿ ಇರಬಹುದೇನೋ? ಬ್ರಿಟಿಷರ ಕಾಲದ ನಿರ್ಮಿತಿಗಳ ಗುಣಮಟ್ಟದ ದ್ಯೋತಕವಾಗಿ ಇಂದಿಗೂ ಗಟ್ಟಿಮುಟ್ಟಾಗಿ ನಿಂತಿರುವ ಸರಳ ಸುಂದರ ಸಿಮೆಂಟ್ ಫಲಕ ತನ್ನ ಚೆಲುವನ್ನು ಇನ್ನೂ ಉಳಿಸಿಕೊಂಡು ಆಕರ್ಷಿಸುತ್ತದೆ. ಜೆ.ಸಿ.ರಸ್ತೆ ಕಡೆಗೆ ಹೋದರೆ ಒಮ್ಮೆ ನೋಡಿ ಬಿಡಿ. ಏಕೆಂದರೆ ಕಟ್ಟಡದ ಉದ್ಘಾಟನೆ ಹೊತ್ತಿಗೆ ಇದೂ ಬಾದಾಮಿಹೌಸ್ ನಂತೆ ನಾಮಾವಶೇಷವಾಗಿರುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ






## ಅಪರೂಪದ ಶಿವನ ಮೂರ್ತಿ

ಶಿವನಿಗೆ ಈ ಲೋಕದಲ್ಲಿ ಸಾಮಾನ್ಯವಾಗಿ ಲಿಂಗ ಪೂಜೆ ನಡೆಯುತ್ತದೆ. ಆದರೆ ಈ ಊರಿನಲ್ಲಿ ಶಿವನಿಗೆ ಮೂರ್ತಿ ಪೂಜೆ ಮಾಡಲಾಗುತ್ತದೆ.

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಅರಳಗುಪ್ಪೆಯಲ್ಲಿರುವ ಪಂಚಲಿಂಗ ದೇವಾಲಯದಲ್ಲಿ ಅಪರೂಪದ ಉಮಾಮಹೇಶ್ವರ ಮೂರ್ತಿ ಇದೆ. ಇಲ್ಲಿ ಶಿವನು ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿರುವ ವಿಶೇಷವಾದ ಸುಂದರ ವಿಗ್ರಹವನ್ನು ನಾವು ನೋಡಬಹುದು.

—ದಂಡಿನಶಿವರ ಮಂಜುನಾಥ್, ಬೆಂಗಳೂರು

## ಮಕ್ಕಳೇ ದೇವರು

ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಮಲ್ಲಯ್ಯನ ಐದೇಶಿ ಮಾಡುತ್ತಾರೆ. ಶ್ರೀಶೈಲಕ್ಕೆ ಪಾದಯಾತ್ರೆ ಮೂಲಕ ಹೋಗಿ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಕಂಬಿಗೆ ಪೂಜೆ ಮಾಡಿ ಪ್ರಸಾದ ಸಮೇತ ತಮ್ಮ ಊರುಗಳಿಗೆ ಬಂದು ಭಕ್ತರ ಮನೆ ಮನೆಗೆ ಹೋಗಿ ಪೂಜೆ ಮಾಡುತ್ತಾರೆ. ಪೂಜೆ ಸಲ್ಲಿಸಿದ ಸ್ವಾಮೀಜಿಗಳು ಭಕ್ತರು ಕೊಡುವ ಬೇಳೆ–ಕಾಳು, ದಕ್ಷಿಣೆ ಸ್ವೀಕರಿಸುತ್ತಾರೆ. ಆ ಸಂದರ್ಭದಲ್ಲಿ ಬಾಲ ಮುತ್ತೈದೆಯರಾದ ಮಕ್ಕಳನ್ನು ಲಕ್ಷ್ಮಿ ಎಂದು ಭಾವಿಸಿ ಅವರಿಗೆ ಅಕ್ಷತೆಯನ್ನು ಉಡಿಯಲ್ಲಿ ಹಾಕಿ ತಲೆಗೆ ಹೂ ಮುಡಿಸಿ ಅವರ ಪಾದಕ್ಕೆ ನಮಸ್ಕರಿಸುತ್ತಾರೆ.

—ಮಂದಾಕಿನಿ ಬಿರಾದಾರ, ವಿಜಯಪುರ

